


## ಫೇಸ್‌ಬುಕ್ ಗ್ರೂಪ್ಸ್

ಹೊಸ ಗ್ರೂಪ್‌ಗಳನ್ನು ಹುಡುಕಲು ಅತ್ಯುತ್ತಮವಾದ ಆ್ಯಪ್. ಫೋಟೊ ಅಪ್‌ಲೋಡ್ ಮಾಡಲು, ಸಂದೇಶಗಳನ್ನು ಹಾಕಲು ಅನುಕೂಲ. ಸ್ಪಷ್ಟವಾದ ಮೇಲ್ಮೈ. ಅವರವರ ವೃತ್ತಿ, ಕುಟುಂಬದ ಸದಸ್ಯರು ಅಥವಾ ಸಮಾನ ಹಿತಾಸಕ್ತಿ ಉಳ್ಳವರ ಗ್ರೂಪ್ ರಚಿಸಲು, ಸೇರಲು ಹಾಗೂ ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಳ್ಳಲು ನೆರವಾಗುತ್ತದೆ. ಆದರೆ ಸ್ಟ್ಯಾಂಡರ್ಡ್ ಫೇಸ್‌ಬುಕ್ ಆ್ಯಪ್‌ನಲ್ಲಿರುವ ಕೆಲವು ಮೂಲಭೂತ ಅನುಕೂಲಗಳು ಈ ಆ್ಯಪ್‌ನಲ್ಲಿ ಇಲ್ಲ. ಸದಸ್ಯರನ್ನು ಹುಡುಕಲು ಸಾಧ್ಯವಿಲ್ಲ, ಪೋಸ್ಟ್‌ಗಳನ್ನು ಎಡಿಟ್ ಮಾಡಲು ಕೂಡಾ ಸಾಧ್ಯವಿಲ್ಲ.

## ಐ4ಸಾಫ್ಟ್‌ವೇರ್ ಫಾಸ್ಟ್ ಕ್ಯಾಮೆರ

ವಿಂಡೋಸ್ ಫೋನ್‌ನ ಈ ಆ್ಯಪ್ ಬರ್ಸ್ಟ್ ಮೋಡ್ ಮತ್ತು ಮ್ಯಾನುವಲ್ ಶೂಟಿಂಗ್ ಮೋಡ್ ಹೊಂದಿದೆ. ಈ ಮೊದಲಿನ ವಿಂಡೋಸ್ ಫೋನ್ ಕ್ಯಾಮೆರಾ ಆ್ಯಪ್‌ನಲ್ಲಿ ಫೋಟೊ ತೆಗೆಯಲು ಹೆಚ್ಚು ಸಮಯ ಹಿಡಿಯುತ್ತಿತ್ತು. ಆದರೆ ಈ ಆ್ಯಪ್‌ನಲ್ಲಿ ನಿರಂತರವಾಗಿ ಫೋಟೋಗಳನ್ನು ಬಹಳ ವೇಗವಾಗಿ ತೆಗೆಯಬಹುದು. ಹಾಗೆಯೇ ಫೋಕಸ್ ಮತ್ತು ಎಕ್ಸ್‌ಪೋಸರ್ ಅನ್ನು ಲಾಕ್ ಮಾಡಬಹುದು. ವಿಂಡೋಸ್ ಫೋನ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆ್ಯಪ್ ಬಳಕೆಗೆ ಸೈನ್‌ಅಪ್ ಅಥವಾ ಖಾತೆ ತೆರೆಯುವ ಅಗತ್ಯವಿಲ್ಲ. ಇಡೀ ಸ್ಕ್ರೀನ್ ವ್ಯೂಫೈಂಡರ್ ಆಗಿ ಪರಿವರ್ತನೆಗೊಳ್ಳುತ್ತದೆ. ಶಟರ್ ಬಟನ್ ಬದಲು ಕ್ಯಾಮೆರ ಸಂಕೇತವಿರುವ ಸ್ಟಾರ್ಟ್ ಬಟನ್ ಕಾಣಿಸಿಕೊಳ್ಳುತ್ತದೆ. ಈ ಬಟನ್ ಒತ್ತಿ ಫೋಟೊ ತೆಗೆಯಲು ಆರಂಭಿಸಬಹುದು. ರಿವ್ಯೂ ಬಟನ್ ಮೂಲಕ ನಿಮಗೆ ಬೇಕಾದ ಫೋಟೋಗಳನ್ನು ಉಳಿಸಿಕೊಂಡು ಉಳಿದವುಗಳನ್ನು ಅಳಿಸಿ ಹಾಕಬಹುದು.




## ಕ್ರಿಯೇಟಿವ್ ಸ್ಟುಡಿಯೊ

ಈ ಫೋಟೊ ಎಡಿಟಿಂಗ್ ಆ್ಯಪ್ ಅನ್ನು ನೋಕಿಯ ಲುಮಿಯ 800 ಅಥವಾ 710 ಮೊಬೈಲ್‌ನಲ್ಲಿ ಬಳಸಬಹುದು. ಸಾಮಾನ್ಯ ಅಂಶಗಳಾದ ಕ್ರಾಪ್, ರೊಟೇಟ್, ಕಾಂಟ್ರಾಸ್ಟ್, ಎಕ್ಸ್‌ಪೋಸರ್ ಮೊದಲಾದವುಗಳಿದ್ದು ಫಿಲ್ಟರ್ಸ್ ಮತ್ತು ಪನೋರಮ ಶಾಟ್ ಅಂಶಗಳು ಇದರ ವೈಶಿಷ್ಟ್ಯ. ಈ ಉಚಿತ ಆ್ಯಪ್ ಮೂಲಕವೇ ಕ್ಯಾಮೆರ ಕೂಡಾ ಬಳಸಬಹುದು. ಪನೋರಮ ಆಯ್ಕೆಯನ್ನು ಬಳಸಿ ಕ್ಯಾಮೆರ ಬಟನ್ ಒತ್ತಿ ನಿಮಗೆ ಬೇಕಾದ ಫೋಟೊಗಳನ್ನು ಕ್ಲಿಕ್ ಮಾಡಿ. ಇದು ನಾಲ್ಕು ವಿವಿಧ ರೀತಿಯ ಫೋಟೊ ತೆಗೆದು ಒಟ್ಟಿಗೆ ಸೇರಿಸಿ ಸುಂದರವಾದ ಹಿನ್ನೆಲೆ ಒದಗಿಸುತ್ತದೆ.




## ಜೀವನ್‌ಸಾಥಿ

ಭಾರತದ ಪ್ರಮುಖ ವಧು–ವರರ ವೇದಿಕೆ ಜೀವನ್‌ಸಾಥಿ.ಕಾಂ ಈಗಾಗಲೇ ಆ್ಯಂಡ್ರಾಯ್ಡ್ ಸಪೋರ್ಟ್ ಮಾಡುವ ಆ್ಯಪ್ ಬಿಡುಗಡೆ ಮಾಡಿದ್ದು, ಹಲವರು ಇದನ್ನು ಬಳಸುತ್ತಿದ್ದಾರೆ. ವಧು–ವರರ ಪೋಷಕರು ಇದಕ್ಕೆ ಲಾಗಾನ್ ಆಗಿ ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಳ್ಳಬಹುದು. ಡೆಸ್ಕ್‌ಟಾಪ್ ವೆಬ್ ರೀತಿಯ ಅನುಕೂಲಗಳನ್ನು ಹೊಂದಿರುವ ಈ ಉಚಿತ ಆ್ಯಪ್‌ಗೆ ಬಳಕೆದಾರರು ನೋಂದಣಿ ಮಾಡಿಕೊಂಡು ವ್ಯಕ್ತಿಚಿತ್ರಣ ಹಾಕಬಹುದು. ಬೇರೆಯವರು ಹಾಕಿದ ಮಾಹಿತಿಯನ್ನೂ ಜಾಲಾಡಬಹುದು.




■ ಎಸ್. ತುಂಬೆ